
ಅನ್ನೋ ಹಟವಂತೆ. ಪದ್ಯ ಓದಕ್ಕೆ, ಮಗ್ಗಿ ಕಾಗುಣಿತ ಹೇಳಕ್ಕೆ ಎಲ್ಲಕೂ ಅವಳೇ ಮುಂದಂತೆ. ಒಮ್ಮೆ ನೀವು ತಪ್ಪು ಮಗ್ಗಿಹೇಳಿದ್ರಿ ಅಂತ ಮೇಸ್ಟರು ಅವಳಿಂದ ನಿಮ್ಮ ಕಪಾಳಕ್ಕೆ ಹೊಡೆಸಿಬಿಟ್ರಂತೆ. ಇದುನ್ನ ನೆನೆಸ್ಕೊಂಡು ಬೇಜಾರು ಪಡುತ್ತಿದ್ದಳು...'' ಉಲ್ಲಾಸದಿಂದ ಸುರುವಾದ ದನಿ ವಿಷಾದದ ಕಡೆಗೆ ತಿರುಗಿತು.

ನಾನು ನೆನಪಿನ ಕಂಪನದಿಂದ ನಕ್ಕೆ. ಹಿಂದೆ ಆಪ್ತರ ಅಂತರಂಗದ ಮಾತು ಕೇಳಿ ನಕ್ಕದ್ದು ಎಷ್ಟು ಕಾಲವಾಗಿತ್ತು? ಬಾಲ್ಯದ ಸವಿ ಸುಖ ಅದು!

ಅಂಜಲಿ ಮತ್ತೆ ಮೊದಲಿನ ಹುರುಪಿನಲ್ಲಿ, ''ನೀವು ಸದಾ ಜೇಬಿನಲ್ಲಿ ಕಡ್ಲೆ ಬೆಲ್ಲ ಇಟ್ಕೊಂಡು ಕುರುಕುತ್ತಿದ್ರಂತೆ. ಅವಳು ನಿಮ್ಮುನ್ನ ಯಾಮಾರ್ಸಿ ಬೆಲ್ಲ ಹಾರಿಸಿಬಿಡೋಳಂತೆ. ಒಂದ್ಸಲ ಪಕ್ಕದ ಹುಡುಗನ ಬುಕ್ಕಿನಿಂದ ನವಿಲುಗರಿ ಕದ್ದು ಮರಿ ಮಾಡಿಸು ಅಂತೇಳಿ ಕೊಟ್ಟಿದ್ರಂತೆ. ಮರಿ ಆಗಿದೆಯಾ ಅಂತ ದಿನಾ ಇಬ್ರು ತೆಗ್‌ತೆಗೆದು ನೋಡ್ತಿದ್ರಂತೆ. ನೀವು ಊರುಬಿಟ್ಟು ಮುಂದುಕ್ಕೋಗೊಗಂಟ ನಿಮ್ಮ ಆಟಗಳು ತಪ್ಪಿರಲಿಲ್ಲವಂತೆ...'' ಹೇಳುತ್ತಿದ್ದಳು. ಮುಂಗಾರು ಮೊದಲ ಮಳೆಯ ನೀರು ಹದಗೊಂಡು ಕಾದ ಹೆಂಟೆಯೊಳಗೆ ನುಗ್ಗಿ, ಅದನ್ನು ಅರಳಿಸಿ, ಮತ್ತೆ ಭುಗಿಲ್ಲನೆ ಮುನ್ನುಗ್ಗುವಂತೆ ಘಟನೆಗಳು ನುಗ್ಗುತ್ತಿದ್ದವು.

ಎಲ್ಲ ಕತೆಯನ್ನೂ ನಿಮ್ಮ ಅವ್ವನೇ ಪೂರ್ಣಗೊಳಿಸಿ ನನ್ನ ಹರಾಜು ಹಾಕಿದ್ದಾಳಲ್ಲ ಅಂತ ರೇಗಿಸಬೇಕೆನ್ನುವಷ್ಟರಲ್ಲಿ ಪೂರ್ಣಾನಂದ, ''ಏ ಅಂಜಲಿ! ಇವರೇನು ನಿನ್ನಿಂದ ಎಲ್ಲ ಕಥೆ ಕೇಳಕ್ಕೆ ಬಂದಿದ್ದಾರಾ?'' ಅಂದ. ಸರಸರನೆ ಹರಿಯುತ್ತಿದ್ದ ನೀರಿಗೆ ಒಡ್ಡು ಹಾಕಿದಂತಾಯತು. ಅಂಜಲಿ ಉತ್ಸಾಹ ಕುಗ್ಗಿಸಿ, ''ಬೇಜಾರಾಯ್ತಾ'' ಅಂದಳು.



ನಾನು, ''ಛೆ ಛೇ ಇಲ್ಲಮ್ಮ. ಹಂಗೆ ನೋಡಿದ್ರೆ ನೀನು ಆಗಿನ ದಿನಗಳ್ಗೆ ಕರ್ಕೊಂಡು ಹೋಗಿಬಿಟ್ಟಿದ್ದೀಯ. ನಿಮ್ಮ ಅವ್ವನೇ ಜ್ವತೆಯಲ್ಲೇ ಇದ್ದಂಗೆ ಅನ್ನಿಸ್ತಿದೆ.'' ಅಂದೆ. ಪೂರ್ಣಾನಂದನನಿಗೆ ಉತ್ಸಾಹಭಂಗ ಮಾಡಿದೆ ಅನಿಸಿರಬೇಕು. ಅವನು, ''ಅಂಕಲ್, ಇವಳು ಮಾತೇ ಆಡೋದಿಲ್ಲ. ಉತ್ಸಾಹ ಬಂದ್ರೆ ಮಾತು ನಿಲ್ಲಿಸೋದು ಇಲ್ಲ. ಗೊತ್ತಾ?'' ಅಂದ. ಹೌದಲ್ಲ, ಗೌರಿಯೂ ಹಿಂಗೆಯೆ! ಮಾತಿಗೂ ಸೈ ಮೌನಕ್ಕೂ ಸೈ...

ಪೂರ್ಣಾನಂದನನೇ ಮುಂದುವರಿಸಿದ: ''ನೋಡಿ ಅಂಕಲ್, ಇವಳು ಬರೀ ಮಾತಿನಮಲ್ಲಿಯಲ್ಲ. ಈಗ ಹಾದು ಬಂದವಲ್ಲ ಸೇವಂತಿಗೆ ಫಸಲು, ಇವಳದು. ಮುಂದೆ ನೋಡಿ ಮಲ್ಲಿಗೆ ಹೊಲ, ಇವಳದು. ಗಂಡ ಸಂತೆ ವ್ಯಾಪಾರ ಮಾಡ್ತಾನೆ. ಇವಳು ಕೆಲಸದೋರ ಜ್ವತೆ ಸೇರ್ಕೊಂಡು ದುಡೀತಾಳೆ. ಹುವ್ವಿನಲ್ಲೇ